ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಹೆಚ್.ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, 2007ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "2007ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಅನುಬಂಧ–2)

(3) ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ 2007 ಮಂಡನೆಗೆ ಅನುಮತಿ ಕೋರಿಕೆ ಹಾಗೂ ವಿಧೇಯಕವನ್ನು ಪರ್ಯಾಲೋಚಿಸುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು): ಮಾನ್ಯ ಅಧ್ಯಕ್ಷರೆ, 2007ನೇ ಸಾಲಿನ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "2007ನೇ ಸಾಲಿನ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿಯನ್ನು ನೀಡಲಾಯಿತು.

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು): ಮಾನ್ಯ ಅಧ್ಯಕ್ಷರೆ, "2007ನೇ ಸಾಲಿನ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಯಿತು.

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಮತ್ತು ಹೆಚ್ಚು ಬಂಡವಾಳವನ್ನು ಆಕರ್ಷಣೆ ಮಾಡುವ ದೃಷ್ಟಿಯಿಂದ ಈ ಅಮ್ಯೂಸ್‌ಮೆಂಟ್ ಪಾರ್ಕ್‌ಗಳಿಗೆ ತೆರಿಗೆ 10% ಇತ್ತು. ಅದನ್ನು 5% ಇಳಿಸುವುದಕ್ಕೆ ಪ್ರಸ್ತಾಪ. ಉದಾಹರಣೆಗೆ ನಮ್ಮ ರಾಜ್ಯಗಳಾದ ಗುಜರಾತ್, ಕೇರಳ, ಮಹಾರಾಷ್ಟ್ರಗಳಲ್ಲಿ ಅವರು 100% ರಷ್ಟು ಮನೋರಂಜನಾ ತೆರಿಗೆಯ concenssion ಅನ್ನು ಅವರು ಕೊಟ್ಟಿದ್ದಾರೆ. Cabinet ನಲ್ಲಿ ಇದರ ಬಗ್ಗೆ ಸುದೀರ್ಘವಾಗಿ ಚರ್ಚೆಯಾಯಿತು. 10% ದಿಂದ 5% ಗೆ ಈ ಮನೋರಂಜನಾ ತೆರಿಗೆಯನ್ನು ಈ ಅಮ್ಯೂಸ್‌ಮೆಂಟ್ ಪಾರ್ಕ್‌ಗಳಿಗೆ ಇಳಿಸಬೇಕು ಎನ್ನುವಂಥದ್ದು, ಅದಕ್ಕೆ ತಾವು ಅನುಮತಿಯನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ತಾವು ಉದ್ದೇಶದಿಂದ clear ಆಗಿ ಹೇಳಿಲ್ಲ. ನಾನು ಹೇಳುತ್ತೇನೆ turf activities 5% ಗೆ ಇಳಿಸಿಬಿಟ್ಟರೆ ನಾವು ಏನು ಮಾಡುವುದು. ಜೂಜು ಯಾವುದು, ಈ ಅಮ್ಯೂಸ್‌ಮೆಂಟ್ ಯಾವುದು, ಯಾವ್ಯಾವ item ಮೇಲೆ ತೆರಿಗೆ ಇಳಿಸುತ್ತೀರಿ ಎನ್ನುವುದನ್ನು ನೀವು ಹೇಳಬೇಕಲ್ಲಾ? ನಮಗೆ ಈ Act copy ಇಲ್ಲ. clear ಆಗಿ ಏನು ಇಲ್ಲ. 10% ದಿಂದ 5% ಗೆ ಇಳಿಸಬೇಕು to encourage tourism. ಯಾವ activities ಮೇಲೆ, ನೀವು ನಾಳೆ ಇದನ್ನೆ apply ಮಾಡಿ race course ನಲ್ಲಿ ಇಳಿಸಿ ಬಿಟ್ಟರೆ ಏನು ಗತಿ. This leads to complications. ಈ ಬಿಲ್‌ನಲ್ಲಿ ಏನು clear ಆಗಿ ಇಲ್ಲ ಸರ್.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಪ್ರವಾಸೋದ್ಯಮಕ್ಕೆ ಇವರು ಹೆಚ್ಚಿನ ಉತ್ತೇಜನ ಕೊಡಬೇಕು ಎನ್ನುವ ದೃಷ್ಟಿಯಿಂದ 10% ದಿಂದ 5% ಮಾಡಿರುವುದಕ್ಕೆ ನಾವು ಒಪ್ಪುತ್ತೇವೆ. ಇದರಿಂದ ಯಾರಿಗೆ ಎಷ್ಟು ಲಾಭ ಎನ್ನುವುದು ಕೂಡ ತಾವು ಕೊಡಬೇಕು. ಮಾಧುಸ್ವಾಮಿಯವರು ಹೇಳಿದ ಹಾಗೆ ನೀವು ಬೇರೆಯದ್ದಕ್ಕೆ ವಿನಾಯಿತಿಯನ್ನು ಕೊಡುತ್ತಾ ಹೋದರೆ ಹೇಗಾಗುತ್ತದೆ. ಅದಕ್ಕೆ ನೀವು Act ನಲ್ಲಿ clearly